**ಸಾಕ್ಷಿಯನ್ನು ದಿನಾಂಕಃ-02-07-2024ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

ಈ ಪ್ರಕರಣದಲ್ಲಿ ಬ್ಯಾಂಕಿನವರಿಗೆ ದಾಖಲಾತಿಗಳನ್ನು ಹಾಜರುಪಡಿಸಲು ಮನವಿಯನ್ನು ನಾನು ಮಾಡಿಕೊಂಡಿಲ್ಲ, ಸಾಕ್ಷಿ ಮುಂದುವರೆದು ನನಗಿಂತ ಮುಂಚೆ ಇದ್ದ ಅಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಬ್ಯಾಂಕಿನ ಸ್ಟೇಟಮೆಂಟ್ ಪ್ರಕಾರ ರೂ.2,58,877/-ಗಳು ಸರಕಾರದ ಖಾತೆಗೆ ಜಮಾ ಆಗಿದ್ದರ ಬಗ್ಗೆ ತೋರಿಸುತ್ತದೆ ಎಂದರೆ ಸರಿ. ರೂ.3,31,118/-ಗಳು ಪ್ರಥಮ ವರ್ತಮಾನ ಹೇಳಿಕೆಯಲ್ಲಿ ನಮೂದಾಗಿದ್ದು, ಆದರೆ ರೂ.2,58,877/-ಗಳು ಮಾತ್ರ ಸರಕಾರದ ಖಾತೆಗೆ ಜಮೆ ಆಗಿದ್ದು, ಇನ್ನುಳಿದ ಹಣದ ಬಗ್ಗೆ ತನಿಖೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಿಂದಿನ ತನಿಖಾಧಿಕಾರಿಗಳು ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಪುನಃ ಪ್ರಥಮ ವರ್ತಮಾನ ಹೇಳಿಕೆ ಕೊಟ್ಟವರ ಮರುಹೇಳಿಕೆ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಎಲ್ಲಾ ದಾಖಲಾತಿಗಳಿಗೆ ಚಾಸಾ-1 ತನ್ನ ಸಹಿ ಹಾಕಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಸಹಿ ಹಾಕುವಾಗ ದಾಖಲಾತಿಯನ್ನು ಪರಿಶೀಲನೆ ಮಾಡಿ ಸಹಿ ಹಾಕುತ್ತಾರೆ ಎಂದರೆ ಸರಿಯಲ್ಲ. ಬ್ಯಾಂಕಿನ ಸ್ಟೇಟಮೆಂಟಗೂ ಮತ್ತು ಆರೋಪಿ ಖಾತೆಗೆ ಜಮಾ ಮಾಡಿದ ಹಣಕ್ಕೂ ವ್ಯತ್ಯಾಸ ಇರುವ ಬಗ್ಗೆ ಹಿಂದಿನ ತನಿಖಾಧಿಕಾರಿಗಳು ತನಿಖೆ ಮಾಡಿದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದಂತಹ ಸ್ಟೇಟಮೆಂಟ್ ದಿನಾಂಕ 26-02-2018 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಚಾಸಾ-1 ದಿನಾಂಕ 03-03-2018 ರಂದು ಪ್ರಥಮ ವರ್ತಮಾನ ಹೇಳಿಕೆ ನೀಡಿದ್ದು, ಅದಕ್ಕಿಂತ ಪೂರ್ವದಲ್ಲಿ ಸದರಿ ಹಣ ಸರಕಾರಕ್ಕೆ ಜಮೆ ಆಗಿತ್ತು ಎಂದರೆ ಸರಿ. ಜಮೆ ಆಗಿದ್ದರ ಬಗ್ಗೆ ಚಾಸಾ-1 ಪ್ರಥಮ ವರ್ತಮಾನ ಹೇಳಿಕೆಯಲ್ಲಿ ನಮೂದು ಮಾಡಿ, ಇನ್ನುಳಿದ ಹಣದ ಬಗ್ಗೆ ತನಿಖೆ ಮಾಡಲು ಕೇಳಿಕೊಂಡಿಲ್ಲ ಎಂದರೆ ಸರಿ. ಆರೋಪಿ ಯಾವುದೇ ಹಣವನ್ನು ದುರುಪಯೋಗಪಡಿಸಿಕೊಂಡು ತನ್ನ ಸ್ವಂತಕ್ಕೆ ಬಳಿಸಿಕೊಂಡಿಲ್ಲ, ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.